# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಹೆಬ್ಬಾಳ (ಎಸ್ಟೀಮ್‌ಮಾಲ್) ಜಂಕ್ಷನ್‌ನಿಂದ ಹೆಚ್.ಎಸ್.ಆರ್.ಲೇಔಟ್ ಸಿಲ್ಕ್‌ಬೋರ್ಡ್ ಜಂಕ್ಷನ್‌ವರೆಗೆ ಉತ್ತರ-ದಕ್ಷಿಣ ಕಾರಿಡಾರ್ ಯೋಜನೆಗೆ ತಯಾರಿಸಿರುವ ಡಿಪಿಆರ್‌ಗೆ ಮತ್ತು ಯೋಜನೆಯನ್ನು ಅನುಷ್ಠಾನಗೊಳಿಸಲು ತಯಾರಿಸಿರುವ 2 ಪ್ಯಾಕೇಜ್‌ಗಳ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಮತ್ತಿತರೆ ವಿಷಯಗಳ ಬಗ್ಗೆ.

**ಓದಲಾಗಿದೆ:**

1) ಮುಖ್ಯ ಆಯುಕ್ತರು, ಬಿಬಿಎಂಪಿ ರವರ ಪತ್ರ ಸಂಖ್ಯೆ: ಬಿಬಿಎಂಪಿ/ಪ್ರ.ಅ/ ಪಿಆರ್/ 2794/2024-25, ದಿನಾಂಕ: 12-02-2025.
2) ಸರ್ಕಾರದ ಆದೇಶ ಸಂಖ್ಯೆ: ನಅಇ 34 ಎಂಎನ್‌ವೈ 2024 (ಇ), ದಿನಾಂಕ: 07-04-2025.
3) ಶ್ರೀ ಸಿದ್ದನಗೌಡ ಹೆಗ್ಗಾರೆಡ್ಡಿ, ಕಾರ್ಯಕಾರಿ ನಿರ್ದೇಶಕರು (ಸಿವಿಲ್), ಬಿಎಂಆರ್‌ಸಿಎಲ್ ಹಾಗೂ ಅಧ್ಯಕ್ಷರು, ತಾಂತ್ರಿಕ ತಜ್ಞರ ಸಮಿತಿ ರವರ ವರದಿ ದಿನಾಂಕ: 05-05-2025.
4) ಸರ್ಕಾರದ ಪತ್ರ ಸಂಖ್ಯೆ: ನಅಇ 34 ಎಂಎನ್‌ವೈ 2024 (ಇ), ದಿನಾಂಕ: 12-05-2025.
5) ಮುಖ್ಯ ಆಯುಕ್ತರು, ಬಿಬಿಎಂಪಿ ರವರ ಪತ್ರ ಸಂಖ್ಯೆ: ಬಿಬಿಎಂಪಿ/ ಮು.ಆ/ಪಿಆರ್/(G)530/2025-26, ದಿನಾಂಕ: 26-05-2025.
6) ಸರ್ಕಾರದ ಪತ್ರ ಸಂಖ್ಯೆ: ನಅಇ 34 ಎಂಎನ್‌ವೈ 2024 (ಇ), ದಿನಾಂಕ: 27-05-2025.
7) ಶ್ರೀ ಸಿದ್ದನಗೌಡ ಹೆಗ್ಗಾರೆಡ್ಡಿ, ಕಾರ್ಯಕಾರಿ ನಿರ್ದೇಶಕರು (ಸಿವಿಲ್), ಬಿಎಂಆರ್‌ಸಿಎಲ್ ಹಾಗೂ ಅಧ್ಯಕ್ಷರು, ತಾಂತ್ರಿಕ ತಜ್ಞರ ಸಮಿತಿ ರವರ ವರದಿ ದಿನಾಂಕ: 29-05-2025.

* * * * *

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ದಿನಾಂಕ: 12-02-2025ರ ಮುಖ್ಯ ಆಯುಕ್ತರು, ಬಿಬಿಎಂಪಿ ರವರ ಪತ್ರದಲ್ಲಿ, ಭೂಮಿಯ ಅಲಭ್ಯತೆ ಮತ್ತು ಭೂಸ್ವಾಧೀನ ಪ್ರಕ್ರಿಯೆಯಲ್ಲಿನ ತೊಡಕುಗಳ ಕಾರಣ ಅಸ್ತಿತ್ವದಲ್ಲಿರುವ ರಸ್ತೆಗಳ ವಿಸ್ತರಣೆಯು ಅತ್ಯಂತ ಕಷ್ಟಸಾಧ್ಯವಾಗಿರುವುದನ್ನು ಗಮನಿಸಿ, ಬೆಂಗಳೂರಿನ ಸಂಚಾರ ದಟ್ಟಣೆಯ ಸಮಸ್ಯೆಯನ್ನು ನಿವಾರಿಸಲು 2024-25ನೇ ಸಾಲಿನ ಆಯವ್ಯಯ ಭಾಷಣದಲ್ಲಿ, ರಾಜ್ಯ ಸರ್ಕಾರವು ಸುರಂಗ ಮಾರ್ಗ ನಿರ್ಮಿಸುವ ಮೂಲಕ ಈ ಸಮಸ್ಯೆಯನ್ನು ಬಗೆಹರಿಸುವ ಉದ್ದೇಶವನ್ನು ಪ್ರಕಟಪಡಿಸಿರುತ್ತದೆ.

ಅದರಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿ.ಬಿ.ಎಂ.ಪಿ) ಮೆ:ಅಲ್ಟಿನಾಕ್ ಕನ್ಸಲ್‌ಟಿಂಗ್ ಇಂಜಿನಿಯರಿಂಗ್ ಇನ್ಕ್ ಸಂಸ್ಥೆಗೆ 'ಬೆಂಗಳೂರು ನಗರ ಸಮಗ್ರ ಸಂಚಾರ ಯೋಜನೆ' ಗಾಗಿ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲು ಕಾರ್ಯಾದೇಶವನ್ನು ನೀಡಲಾಗಿತ್ತು. ಅದರಂತೆ, ಸದರಿ ಸಂಸ್ಥೆಯು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ: 07 ರ ಪಥದಲ್ಲಿ ಉತ್ತರ-ದಕ್ಷಿಣ ಮತ್ತು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ: 04 ರ ಪಥದಲ್ಲಿ ಪೂರ್ವ-ಪಶ್ಚಿಮ ಒಟ್ಟು ಸುಮಾರು 40 ಕಿ.ಮೀ ಉದ್ದದ ವಾಹನ ಸುರಂಗ ಮಾರ್ಗಗಳನ್ನು ನಿರ್ಮಿಸುವ, ಸುಮಾರು 109.50 ಕಿ.ಮೀ ಉದ್ದದ ವಿವಿಧ 16 ರಸ್ತೆ ಎಲಿವೇಟೆಡ್ ಕಾರಿಡಾರ್‌ಗಳನ್ನು ನಿರ್ಮಿಸುವ ಹಾಗೂ ಸುಮಾರು 40.50 ಕಿ.ಮೀ ಉದ್ದದ ಡಬಲ್ ಡೆಕ್ಕರ್ ಮೆಟ್ರೋ ಸಂಯುಕ್ತ ಮೇಲ್ಸೇತುವೆಗಳನ್ನು ನಿರ್ಮಿಸುವ, ಮೂರು ಮೆಗಾ ಯೋಜನೆಗಳಿಗೆ ಸಂಬಂಧಿಸಿದಂತೆ ಕಾರ್ಯಸಾಧ್ಯತಾ ವರದಿಯನ್ನು ನೀಡಿರುತ್ತದೆ. ಈ ಮೂರು ಮೆಗಾ ಯೋಜನೆಗಳ ಅನುಷ್ಠಾನದಿಂದ, ಪ್ರಸ್ತುತ ಪ್ರತಿ ಗಂಟೆಗೆ 15 ಕಿ.ಮೀ ಗಿಂತ ಕಡಿಮೆ ಇರುವ ವಾಹನ ಸಂಚಾರ ವೇಗವನ್ನು ಕನಿಷ್ಠ 25 ರಿಂದ 30 ಕಿ.ಮೀ ವರೆಗೆ ಹೆಚ್ಚಿಸಬಹುದೆಂದು ಅಭಿಪ್ರಾಯಪಡಲಾಗಿದೆ.

ಈ ಹಿನ್ನೆಲೆಯಲ್ಲಿ, ಮುಖ್ಯ ಆಯುಕ್ತರು, ಬಿಬಿಎಂಪಿ ರವರು ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪರಿಗಣಿಸಿ, ದಿನಾಂಕ: 22-08-2024 ರಂದು ನಡೆದ ಸಭೆಯಲ್ಲಿ ವಿಷಯ ಸಂಖ್ಯೆ: ಸಿ: 409/2024 ಅಡಿ ಸಚಿವ ಸಂಪುಟವು ಕೈಗೊಂಡ ನಿರ್ಣಯದ ಅನುಸಾರ ಸರ್ಕಾರದ ಆದೇಶ ಸಂಖ್ಯೆ: ನಅಇ 34 ಎಂಎನ್‌ವೈ 2024 (ಇ), ದಿನಾಂಕ: 04-09-2024 ಅನ್ನು ಹೊರಡಿಸಿ, ಬೆಂಗಳೂರು ನಗರದ ಹೆಬ್ಬಾಳ ಮೇಲ್ಸೇತುವೆ (ಎಸ್ಟೀಮ್ ಮಾಲ್)ಪ್ರದೇಶದಿಂದ ಹೊಸೂರು ರಸ್ತೆಯ ಸಿಲ್ಕ್ ಬೋರ್ಡ್ ಜಂಕ್ಷನ್‌ನ ಮೇಲ್ಸೇತುವೆಯವರೆವಿಗೂ ಭೂಗತ ವಾಹನ ಸುರಂಗ ಮಾರ್ಗವನ್ನು ಟ್ವಿನ್‌ಟ್ಯೂಬ್ ಮಾದರಿಯಲ್ಲಿ ನಿರ್ಮಿಸಲು ರಾಜ್ಯ ಸರ್ಕಾರದ ತಾತ್ವಿಕ ಅನುಮೋದನೆಯನ್ನು ನೀಡಲಾಗಿರುತ್ತದೆ.

ದಿನಾಂಕ: 04-09-2024ರ ಆದೇಶದಂತೆ ದಿನಾಂಕ: 30-05-2024ರಂದು "ಬೆಂಗಳೂರು ನಗರದ ವ್ಯಾಪ್ತಿಯಲ್ಲಿನ ಹೆಬ್ಬಾಳ (ಎಸ್ಟೀಮ್ ಮಾಲ್) ಜಂಕ್ಷನ್ ನಿಂದ ಸಿಲ್ಕ್ ಬೋರ್ಡ್ ಜಂಕ್ಷನ್ ವರೆಗೂ ಉತ್ತರ-ದಕ್ಷಿಣ ಕಾರಿಡಾರ್ ಯೋಜನೆಗೆ" ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಟೆಂಡರ್ ಕರೆದು ಮೆ: ರೋಡಿಕ್ ಕನ್ಸಲ್‌ಟೆಂಟ್ಸ್ ಪ್ರೈ ಲಿ. ರವರಿಗೆ ದಿನಾಂಕ: 12-08-2024 ರಂದು ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಮುಂದುವರೆದು, ಮುಖ್ಯ ಆಯುಕ್ತರ ದಿನಾಂಕ: 17-09-2024ರ ಪ್ರಸ್ತಾವನೆಯನ್ನು ಪರಿಗಣಿಸಿ, ದಿನಾಂಕ: 05-12-2024ರ ಸರ್ಕಾರದ ಪತ್ರದಲ್ಲಿ, ಬೆಂಗಳೂರು ಸುರಂಗ ರಸ್ತೆ ಯೋಜನೆಗೆ, ಬಿಬಿಎಂಪಿಯು ರೂ.19,000.00 ಕೋಟಿಗಳ ವರೆಗೆ ಸಾಲವನ್ನು ಪಡೆಯಲು ರಾಜ್ಯ ಸರ್ಕಾರದ ಖಾತರಿಯನ್ನು ಒದಗಿಸಲಾಗುವುದೆಂದು ರಾಜ್ಯ ಸರ್ಕಾರದಿಂದ ಬದ್ಧತೆ ನೀಡಲಾಗಿದೆ.

ಈಗಾಗಲೇ ಸಿದ್ಧಪಡಿಸಲಾಗಿದ್ದ ಕಾರ್ಯಸಾಧ್ಯತಾ ವರದಿಯ ಆಧಾರದ ಮೇಲೆ, ಮೆ: ರೋಡಿಕ್ ಸಂಸ್ಥೆಯವರು ಹೆಚ್ಚುವರಿ ಅಧ್ಯಯನವನ್ನು ಕೈಗೊಂಡು ವಾಹನ ಸುರಂಗ ಮಾರ್ಗದ ಒಳ ಮತ್ತು ಹೊರ ಬಿಂದುಗಳನ್ನು ಗುರುತಿಸಿ ವಾಹನ ದಟ್ಟಣೆಯನ್ನು ಮತ್ತಷ್ಟು ಕಡಿಮೆಗೊಳಿಸಲು ಮತ್ತು ಹೆಚ್ಚುವರಿಯಾಗಿ ಇಂಟರ್‌ಚೇಂಜ್‌ಗಳನ್ನು ಗುರುತಿಸಿ, ಡಿ.ಪಿ.ಆರ್.ಅನ್ನು ತಯಾರಿಸಿರುತ್ತಾರೆ. ಸದರಿ ಯೋಜನೆಯ ಅಡಿ ಒಟ್ಟು 16.745 ಕಿ.ಮೀ

ಉದ್ದದ "ಅವಳಿ ಭೂಗತ ವಾಹನ ಸುರಂಗ ಮಾರ್ಗ"ವನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು, ಸದರಿ ಉದ್ದೇಶದಂತೆ ಹಲವಾರು ಬಗೆಯ ಅಂದಾಜು ಪಟ್ಟಿಗಳನ್ನು ತಯಾರಿಸಿ ಮೆ: ರೋಡಿಕ್ ಸಂಸ್ಥೆಯವರು ಕರಡು ಡಿ.ಪಿ.ಆರ್‌ಅನ್ನು ಸಲ್ಲಿಸಿರುತ್ತಾರೆ.

ಕರಡು ಡಿ.ಪಿ.ಆರ್ ಅನ್ನು, ಕೆಳಕಂಡ ಇಲಾಖೆಗಳು / ಸಂಸ್ಥೆಗಳಿಗೆ ಸಾದರಪಡಿಸಲಾಗಿರುತ್ತದೆ. ಆಯಾ ಇಲಾಖೆ/ಸಂಸ್ಥೆಗಳು, ಕೋಷ್ಟಕದಲ್ಲಿ ತಿಳಿಸಿದಂತೆ ಅಭಿಪ್ರಾಯ ವ್ಯಕ್ತಪಡಿಸಿರುವುದಾಗಿ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ. ರವರು ತಿಳಿಸಿರುತ್ತಾರೆ.

| ಕ್ರ.ಸಂ | ಸಂಸ್ಥೆ | ವಿವರ |
|---|---|---|
| 1 | ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ | ಪಿಪಿಪಿ ಯೋಜನೆಗಳನ್ನು ಪರಿಣಾಮ ಕಾರಿಯಾಗಿ ಅನುಷ್ಠಾನಗೊಳಿಸಲು ಆಡಳಿತ ಇಲಾಖೆಗಳು ಅನುಸರಿಸಬೇಕಾದ ಪ್ರಕ್ರಿಯೆ ಗಳ "Process Flow Chart" ರನ್ವಯ ಯೋಜನೆಯ ಪ್ರಸ್ತಾವನೆಗೆ ಸಿದ್ಧಪಡಿಸಲಾದ ಅಧ್ಯಯನ ವರದಿಗಳು ಮತ್ತು ಕರಡು ಸಂಗ್ರಹಣಾ ದಾಖಲಾತಿಗಳನ್ನು ಬಿಬಿಎಂಪಿಯ ಆಂತರಿಕ ಪಿಪಿಪಿ ಕೋಶ ಮತ್ತು ನಗರಾಭಿವೃದ್ಧಿ ಇಲಾಖೆಯ ಆಂತರಿಕ ಪಿಪಿಪಿ ಕೋಶಗಳಲ್ಲಿ ಪರಿಶೀಲಿಸಿದ ನಂತರ ಈ ಕಚೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ. |
| 2 | ಡಿ.ಯು.ಎಲ್.ಟಿ. | Since, the Authority (BMLT) is yet to be operational, the Technical observation/comments are enclosed herewith for suitably incorporating in the feasibility study. |
| 3 | ಬಿ.ಎಂ.ಆರ್.ಸಿ.ಎಲ್ | ಸದರಿ ಸಂಸ್ಥೆಯವರು 14 ಅಂಶಗಳನ್ನು ಪತ್ರ ಸಂಖ್ಯೆ: BMRCL/Road Tunnel/2024/ 13318, ದಿನಾಂಕ: 30.11.2024 ರಲ್ಲಿ ತಿಳಿಸಿರುವ ಅಂಶಗಳನ್ನು ಪರಿಗಣಿಸಲು ಕೋರಿರುತ್ತಾರೆ. |
| 4 | ರಾಜ್ಯ ಮಟ್ಟದ ಪರಿಸರ ಒತ್ತಡ ಮೌಲ್ಯಮಾಪನ ಪ್ರಾಧಿಕಾರ-ಕರ್ನಾಟಕ | ಸುರಂಗ ಮಾರ್ಗದ ನಿರ್ಮಾಣಕ್ಕೆ ಪರಿಸರ ಒತ್ತಡ ಮೌಲ್ಯಮಾಪನ ಪ್ರಾಧಿಕಾರದ ವ್ಯಾಪ್ತಿಯಿಂದ ವಿನಾಯಿತಿ ಇರುತ್ತದೆ ಎಂದು ಅಭಿಪ್ರಾಯಿಸಿದೆ. |

ಮೇಲ್ಕಂಡ 04 ಸಂಸ್ಥೆಗಳು ವಿವಿಧ ರೂಪದಲ್ಲಿ ಸದರಿ ಕರಡು ಡಿ.ಪಿ.ಆರ್‌ಗೆ ಸಲಹೆ ಮತ್ತು ಅಭಿಪ್ರಾಯಗಳನ್ನು ತಿಳಿಸಿದ್ದು, ಸದರಿ ಸಂಸ್ಥೆಗಳ ಅಭಿಪ್ರಾಯಗಳನ್ನು ಉನ್ನತ ಮಟ್ಟದಲ್ಲಿ ಚರ್ಚಿಸಿ ನಿರ್ಧಾರಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ ಎಂದು ಮುಖ್ಯ ಆಯುಕ್ತರು ವರದಿ ಮಾಡಿರುತ್ತಾರೆ.

ನಗರ ಭೂ ಸಾರಿಗೆ ನಿರ್ದೇಶನಾಲಯವು ತನ್ನ ಅಭಿಪ್ರಾಯದಲ್ಲಿ 'Since, the Authority (BMLT) is yet to be operational, the Technical observation/comments are enclosed herewith for suitably incorporating in the feasibility study' ಎಂದು ತಿಳಿಸಿರುವುದಾಗಿ ಮುಖ್ಯ ಆಯುಕ್ತರು ವರದಿ ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 05-03-2025 ರಂದು ವಿವರವಾದ ಸಭೆಯೊಂದನ್ನು ನಡೆಸಲಾಗಿರುತ್ತದೆ. ಈ ಸಭೆಯ ನಿರ್ಣಾಯಕ ಉದ್ಧೃತ ಭಾಗ ಈ ಕೆಳಕಂಡಂತಿದೆ;

> "**After Detailed discussion its held that HAM model is a well-balanced option between risks and benefits in protecting the interest of both the Government and investor and also found more practical and acceptable for investors.**
>
> The Addl. Chief Secretary informed the members of the meeting that, the choice between the HAM and BOT model has to be vetted by the Finance Dept. GOK".

ಮುಂದುವರೆದಂತೆ, ಸದರಿ ಯೋಜನೆಗೆ ಅಂದಾಜು ಪಟ್ಟಿಗಳನ್ನು ಅಂತಿಮ ಡಿ.ಪಿ.ಆರ್‌ನಲ್ಲಿ ಒಳಪಡಿಸಲು 03 ಬಗೆಯ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ವಿವರ ಕೆಳಕಂಡಂತೆ ಇರುತ್ತದೆ.

1. **ಸಾಧಾರಣಾ ವೇಗದ ಅಂದರೆ, ವಾರ್ಷಿಕ 1.08 ಕಿ.ಮೀ ಉದ್ದ ಕೊರೆಯುವ 06 ಸಂಖ್ಯೆಯ ಸುರಂಗ ಕೊರೆಯುವ ಯಂತ್ರಗಳನ್ನು ಬಳಕೆ ಮಾಡುವುದು.**

   ಈ ಅಂದಾಜು ಪಟ್ಟಿಯಂತೆ, ಒಟ್ಟು ಅವಳಿ ಭೂಗತ ವಾಹನ ಸುರಂಗ ಮಾರ್ಗದ ಉದ್ದ 33.490 ಕಿ.ಮೀಗಳನ್ನು 62 ತಿಂಗಳುಗಳಲ್ಲಿ ಕೊರೆಯುವ ಹಾಗೂ ನಂತರದ 12 ತಿಂಗಳಲ್ಲಿ ನಿರ್ಮಿಸುವ ಯೋಜನೆಯಾಗಿದ್ದು, ಸದರಿ ಯೋಜನೆಯ ಮೊತ್ತವು ರೂ.15,548.00 ಕೋಟಿಗಳಾಗಿರುತ್ತದೆ.

2. **ಬಹುವೇಗದ ಅಂದರೆ, ವಾರ್ಷಿಕ 2.00 ಕಿ.ಮೀ ಉದ್ದ ಕೊರೆಯುವ 06 ಸಂಖ್ಯೆಯ ಸುರಂಗ ಕೊರೆಯುವ ಯಂತ್ರಗಳನ್ನು ಬಳಕೆ ಮಾಡುವುದು.**

   ಈ ಅಂದಾಜು ಪಟ್ಟಿಯಂತೆ, ಒಟ್ಟು ಅವಳಿ ಭೂಗತ ವಾಹನ ಸುರಂಗ ಮಾರ್ಗದ ಉದ್ದ 33.490 ಕಿ.ಮೀಗಳನ್ನು 34 ತಿಂಗಳುಗಳಲ್ಲಿ ಕೊರೆಯುವ ಹಾಗೂ ನಂತರದ 12 ತಿಂಗಳಲ್ಲಿ ನಿರ್ಮಿಸುವ ಯೋಜನೆಯಾಗಿದ್ದು, ಸದರಿ ಯೋಜನೆಯ ಮೊತ್ತವು ರೂ.16,980.00 ಕೋಟಿಗಳಾಗಿರುತ್ತದೆ.

3. **ಬಹುವೇಗದ ಅಂದರೆ, ವಾರ್ಷಿಕ 2.00 ಕಿ.ಮೀ ಉದ್ದ ಕೊರೆಯುವ 08 ಸಂಖ್ಯೆಯ ಸುರಂಗ ಕೊರೆಯುವ ಯಂತ್ರಗಳನ್ನು ಬಳಕೆ ಮಾಡುವುದು.**

ಈ ಅಂದಾಜು ಪಟ್ಟಿಯಂತೆ, ಒಟ್ಟು ಅವಳಿ ಭೂಗತ ವಾಹನ ಸುರಂಗ ಮಾರ್ಗದ ಉದ್ದ 33.490 ಕಿ.ಮೀಗಳನ್ನು 26 ತಿಂಗಳುಗಳಲ್ಲಿ ಕೊರೆಯುವ ಹಾಗೂ ನಂತರದ 12 ತಿಂಗಳಲ್ಲಿ ನಿರ್ಮಿಸುವ ಯೋಜನೆಯಾಗಿದ್ದು, ಸದರಿ ಯೋಜನೆಯ ಮೊತ್ತವು ರೂ.17,780.13 ಕೋಟಿಗಳಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಮೇಲಿನ ಕ್ರಸಂ.02 ಮತ್ತು 03 ರ ಅಂದಾಜು ಪಟ್ಟಿಗಳನ್ನು ವಿಶ್ಲೇಷಣೆ ಮಾಡಲಾಗಿದ್ದು, ಸದರಿ ಯೋಜನೆಯನ್ನು ಸುಧಾರಿತ ಬಿ.ಓ.ಟಿ (Improvised BOT) ಆಧಾರದಲ್ಲಿ ಕೈಗೊಳ್ಳಲಾಗುತ್ತಿರುವುದರಿಂದ ಸಮಯಕ್ಕೆ ಹೆಚ್ಚಿನ ಪ್ರಾಧಾನ್ಯತೆ ಮತ್ತು ಜೋಡಿ ಸುರಂಗ ಕೊರೆಯುವ ಯಂತ್ರಗಳನ್ನು ಬಳಸುವುದು ಸೂಕ್ತವೆಂದು ಅಭಿಪ್ರಾಯಿಸಿ ಕ್ರ.ಸಂ.03ರ ಅಂದಾಜು ಪಟ್ಟಿಯನ್ನು ಅಂತಿಮಗೊಳಿಸಲಾಗಿರುತ್ತದೆ ಎಂದು ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ. ರವರು ತಿಳಿಸಿರುತ್ತಾರೆ.

ಮೆ: ಬಿ.ಸಿ.ಜಿ ಸಂಸ್ಥೆಯವರು, ಸದರಿ ಯೋಜನೆಯ ಅಂದಾಜು ಪಟ್ಟಿಯನ್ನು ಪರಿಶೀಲಿಸಿರುತ್ತಾರೆ. ಸದರಿ ಪರಿಶೀಲನೆಯಂತೆ, ಸುಧಾರಿತ ಬಿ.ಓ.ಟಿ ಆಧಾರದ ಮೇಲೆ ವಾಹನ ಸುರಂಗ ಮಾರ್ಗದ ಒಟ್ಟು ನಿರ್ಮಾಣ ವೆಚ್ಚ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ / ಘನ ಸರ್ಕಾರವು ಹೊಂದಿಸಬೇಕಾದ ವಾರ್ಷಿಕ ಹೆಚ್ಚುವರಿ ಮೊತ್ತ(Escalation), ಇತ್ಯಾದಿಗಳನ್ನು ಪರಿಶೀಲಿಸಿ, ಗುತ್ತಿಗೆ ಟೆಂಡರ್ ದಸ್ತಾವೇಜನ್ನು ಸಿದ್ಧಪಡಿಸಲಾಗಿರುತ್ತದೆ.

ಮತ್ತೊಂದು ಪ್ರಮುಖ ಅಂಶವಾಗಿ ಮೆ: ರೋಡಿಕ್ ಸಂಸ್ಥೆಯವರು ನೀಡಿರುವ ವಾಹನ ದಟ್ಟಣೆ ಮತ್ತು ಸಂಭವನೀಯ ಏರಿಕೆ (Traffic Density and Probability of Traffic Increase) ಆಧಾರದ ಮೇಲೆ, ಯೋಜನೆಯನ್ನು ಸಾರ್ವಜನಿಕರಿಗೆ ಮುಕ್ತಗೊಳಿಸಿದ ನಂತರ, 04 ಚಕ್ರದ ವಾಹನಗಳಿಗೆ ಏಕ ಸಂಚಾರದ ಪೂರ್ಣ ಉದ್ದದ ಸುರಂಗ ಮಾರ್ಗ ಬಳಕೆಗೆ, ಪ್ರತಿ ಕಿ.ಮೀಗೆ ಕನಿಷ್ಠ ದರ ರೂ.19.00 Toll ಆಗುವುದೆಂದು ಅಂದಾಜು ಮಾಡಲಾಗಿರುತ್ತದೆ. ಈ ದರವನ್ನು ಮುಂಬೈ ನಗರದ Trans Harbour ಮೇಲು ರಸ್ತೆಗೆ ಹೋಲಿಸಿದ್ದು, ಸದರಿ ಮೇಲ್ಸೇತುವೆಯಲ್ಲಿ 22 ಕಿ.ಮೀ. ಗೆ ರೂ.250.00 Tollಅನ್ನು ವಿಧಿಸಲಾಗುತ್ತಿದೆ. ಈ ಹಿನ್ನಲೆಯಲ್ಲಿ, ಉದ್ದೇಶಿತ ಟನಲ್ ರಸ್ತೆಗೆ 2029-2030ರ ಅವಧಿಗೆ ರೂ.19.00 ಪ್ರತಿ ಕಿ.ಮೀಗೆ ಸಮಂಜಸವೆಂದು ಅಭಿಪ್ರಾಯಿಸಲಾಗಿದೆ.

ಈ ಸುಧಾರಿತ ಬಿ.ಓ.ಟಿ ಯೋಜನೆಗೆ ಬಿ.ಬಿ.ಎಂ.ಪಿ/ ರಾಜ್ಯ ಸರ್ಕಾರವು ಶೇ.35 ರಿಂದ ಶೇ.40 ರಷ್ಟು ವಿ.ಜಿ.ಎಫ್ ಭರಿಸಬೇಕಾಗಬಹುದೆಂದು ಹಾಗೂ ಉತ್ತರ - ದಕ್ಷಿಣ ಮತ್ತು ಪೂರ್ವ-ಪಶ್ಚಿಮ ಭೂಗತ ವಾಹನ ಸುರಂಗ ಮಾರ್ಗಗಳೆರಡಕ್ಕೂ, ಒಟ್ಟು ರೂ.40000.00 ಕೋಟಿ ಯೋಜನಾ ಅಂದಾಜು ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ. ವಿ.ಜಿ.ಎಫ್ ಮೊತ್ತವನ್ನು ಗರಿಷ್ಠ ಶೇ.40 ರಷ್ಟು ಎಂದು ಮತ್ತು ಭೂಸ್ವಾಧೀನ ವೆಚ್ಚ ರೂ.3000.00 ಕೋಟಿಗಳನ್ನು ಎಂದು ಪರಿಗಣಿಸಿ ಬಿ.ಬಿ.ಎಂ.ಪಿ / ರಾಜ್ಯ ಸರ್ಕಾರದ ಪಾಲು ಸುಮಾರು ರೂ.19000.00 ಕೋಟಿಗಳು ಆಗಬಹುದೆಂದು ಲೆಕ್ಕಚಾರ ಮಾಡಲಾಗಿರುತ್ತದೆ. ಈ ಹಿನ್ನಲೆಯಲ್ಲಿ, ರಾಜ್ಯ ಸರ್ಕಾರವು ವಿ.ಜಿ.ಎಫ್ ಮೊತ್ತ ರೂ.19000.00 ಕೋಟಿಗಳಿಗೆ ಗ್ಯಾರಂಟಿಯನ್ನು ನೀಡಿರುತ್ತದೆ.

ಸದರಿ ಗ್ಯಾರಂಟಿಯ ಆಧಾರದ ಮೇಲೆ ಬಿ.ಬಿ.ಎಂ.ಪಿ. ಯು, ಭಾರತ ಸರ್ಕಾರ ಸ್ವಾಮ್ಯದ ಹಣಕಾಸು ಸಂಸ್ಥೆಗಳಿಂದ ರೂ.8000.00 ಕೋಟಿಗಳ ಆರ್ಥಿಕ ನೆರವನ್ನು, ಸಾಲದ ರೂಪದಲ್ಲಿ

ಪಡೆಯಲು ಉದ್ದೇಶಿಸಿ, Expression of Interest for availing Financial Assistance from Financial Institutions ಆಸಕ್ತಿ ವ್ಯಕ್ತಪಡಿಸುವಿಕೆ ಅಧಿಸೂಚನೆಯನ್ನು, ದಿನಾಂಕ:07.12.2024 ರಂದು ಹೊರಡಿಸಿರುತ್ತದೆ. ಸದರಿ ಅಧಿಸೂಚನೆಯಂತೆ, ಒಟ್ಟು 10 ಸಂಸ್ಥೆಗಳು ಆಸಕ್ತಿಯನ್ನು ವ್ಯಕ್ತಪಡಿಸಿ ಟೆಂಡರ್ ದಾಸ್ತಾವೇಜನ್ನು ಪಡೆದಿರುತ್ತವೆ. ಈ ಪೈಕಿ 03 ಸಂಸ್ಥೆಗಳು ಮಾತ್ರ ಆರ್ಥಿಕ ನೆರವನ್ನು ಸಾಲ ರೂಪದಲ್ಲಿ ನೀಡಲು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಬಡ್ಡಿ ವಿವರ ಕೆಳಕಂಡಂತೆ ಇರುತ್ತದೆ:

| Sl. No. | Name of Financial Institution | Rate of Interest Pre-COD | Rate of Interest Post-COD | Remarks |
|---|---|---|---|---|
| 1 | M/s HUDCO | 9.15% | 9.00% | L-1 |
| 2 | M/s. Power Finance Corporation of India | 9.15% | 9.05% | L-2 |
| 3 | M/s. HDFC | 9% to 10% | | L-3 |

ಮೇಲ್ಕಂಡ ಕೋಷ್ಟಕದಂತೆ ಮೆ: ಹುಡ್ಕೋ ಸಂಸ್ಥೆ ರವರು ಆರ್ಥಿಕ ನೆರವಿಗೆ ಅತೀ ಕಡಿಮೆ ಬಡ್ಡಿ ದರವನ್ನು ನಮೂದಿಸಿದ್ದು, ದಿನಾಂಕ:31.01.2025 ರಂದು ದರ ಸಂಧಾನವನ್ನು ನಡೆಸಲಾಗಿ, ದಿನಾಂಕ: 05.02.2025 ರಂದು ಸಂಧಾನಿತ ಬಡ್ಡಿ ದರವನ್ನು ಈ ಕೆಳಕಂಡಂತೆ ನೀಡಿರುತ್ತಾರೆ:

| Sl. No. | Name of Financial Institution | Rate of Interest pre COD before negoatiation | Rate of Interest Pre COD after negotiation | Rate of Interest Post COD before negotiation | Rate of Interest Post COD after negotiation |
|---|---|---|---|---|---|
| 1 | M/s HUDCO | 9.15% | 8.95% | 9.05% | 8.95% |

ಈ ಬಡ್ಡಿ ದರವು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು, ಬೆಂಗಳೂರು ಬ್ಯುಸಿನೆಸ್ ಕಾರಿಡಾರ್(ಪಿಆರ್ಆರ್) ಯೋಜನೆಗೆ ಈಗಾಗಲೇ ರೂ. 27,000.00ಕೋಟಿಗಳನ್ನು ಇದೇ ಬಡ್ಡಿ ದರದಲ್ಲಿ ಇದೇ M/s HUDCO ಸಂಸ್ಥೆಯಿಂದ ಸಾಲದ ರೂಪದಲ್ಲಿ ಪಡೆಯಲು ಉದ್ದೇಶಿಸಿರುವುದಕ್ಕೆ ಸಮನಾಗಿರುತ್ತದೆ.

ಸದರಿ ಕಾಮಗಾರಿಯ ಅನುಷ್ಠಾನದ ಬಗ್ಗೆ ಸುರಂಗ ಕೊರೆಯುವ ಯಂತ್ರದ ತಯಾರಿಕಾ ಸಂಸ್ಥೆಗಳೊಂದಿಗೆ ಚರ್ಚಿಸಲಾಗಿದೆ. ಕಾಮಗಾರಿಯ ವಿಸ್ತೃತ ಯೋಜನಾ ವರದಿ ತಯಾರಿಕಾ ಸಂಸ್ಥೆಯಾದ ಮೆ: ರೋಡಿಕ್ ಕನ್ಸಲ್‌ಟೆಂಟ್ಸ್ ರವರು ಯೋಜನೆಯನ್ನು ಎರಡು ಪ್ಯಾಕೇಜ್‌ಗಳ ಅಡಿಯಲ್ಲಿ ಅನುಷ್ಠಾನಗೊಳಿಸಿದಲ್ಲಿ, ಹೆಚ್ಚಿನ ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸುವಿಕೆಗೆ ಅನುಕೂಲವಾಗುತ್ತದೆ ಎಂದು ಅಭಿಪ್ರಾಯಿಸಿರುತ್ತಾರೆ. ಈ ಹಿನ್ನಲೆಯಲ್ಲಿ, ಸದರಿ ಯೋಜನೆಯನ್ನು ಉತ್ತರ ಮತ್ತು ದಕ್ಷಿಣ ಭಾಗಗಳಾಗಿ ವಿಂಗಡಿಸಿ ಎರಡು ಪ್ಯಾಕೇಜ್‌ಗಳ ಅಡಿಯಲ್ಲಿ ಟೆಂಡರ್ ಕರೆದು ಕಾಮಗಾರಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುತ್ತದೆ. ವಿ.ಜಿ.ಎಫ್‌ನ ಗರಿಷ್ಠ ಪ್ರಮಾಣವನ್ನು ಶೇ.40 ರಷ್ಟಕ್ಕೆ ಸೀಮಿತಗೊಳಿಸಿಕೊಂಡು, ಪ್ಯಾಕೇಜ್-1

(ಉತ್ತರ) ಮತ್ತು ಪ್ಯಾಕೇಜ್-2 (ದಕ್ಷಿಣ)ಗಳ ಕಾಮಗಾರಿ ಅಂದಾಜು ಪಟ್ಟಿಯ ವಿವರಗಳನ್ನು ಒದಗಿಸಲಾಗಿದೆ.

ವಾರ್ಷಿಕ ಹೆಚ್ಚುವರಿ ಶೇ.5 ಮತ್ತು ವಾರ್ಷಿಕ ಬಡ್ಡಿದರ ಒಳಗೊಂಡಂತೆ ಅಂದಾಜು ಪಟ್ಟಿಯ ಮೊತ್ತ, ಬಿ.ಬಿ.ಎಂ.ಪಿ. ಯ ವಿ.ಜಿ.ಎಫ್. ಮತ್ತು ಟೆಂಡರ್‌ನಲ್ಲಿ ಭಾಗವಹಿಸುವ ಸಂಸ್ಥೆಗಳ ಬಂಡವಾಳ ಹೂಡಿಕೆ ಮೊತ್ತವನ್ನು ಕೆಳಗಿನ ತುಲನಾತ್ಮಕ ಪಟ್ಟಿಯಲ್ಲಿ ತೋರಿಸಲಾಗಿದೆ:

| ಕ್ರ. ಸಂ | ವಿವರ | ಅಂದಾಜು ಪಟ್ಟಿಯ ಮೊತ್ತ ರೂ. ಕೋಟಿಗಳಲ್ಲಿ (ಜಿ.ಎಸ್.ಟಿ ಹೊರತುಪಡಿಸಿ) ಮತ್ತು ವಾರ್ಷಿಕ ಹೆಚ್ಚುವರಿ 5% ಮತ್ತು ವಾರ್ಷಿಕ ಬಡ್ಡಿದರ ಒಳಗೊಂಡಂತೆ | ಬಿ.ಬಿ.ಎಂ.ಪಿ. ವಿ.ಜಿ.ಎಫ್ (ಮೊತ್ತ ರೂ. ಕೋಟಿಗಳಲ್ಲಿ) (ಜಿ.ಎಸ್.ಟಿ. ಹೊರತುಪಡಿಸಿ) ಮತ್ತು ವಾರ್ಷಿಕ ಹೆಚ್ಚುವರಿ 5% ಮತ್ತು ವಾರ್ಷಿಕ ಬಡ್ಡಿದರ ಒಳಗೊಂಡಂತೆ (ಗರಿಷ್ಠ ಮೊತ್ತ) | ಟೆಂಡರ್‌ನಲ್ಲಿ ಭಾಗವಹಿಸುವ ಸಂಸ್ಥೆಗಳ ಬಂಡವಾಳ ಹೂಡಿಕೆ ಮೊತ್ತ (ಜಿ.ಎಸ್.ಟಿ. ಹೊರತುಪಡಿಸಿ) ಮತ್ತು ವಾರ್ಷಿಕ ಹೆಚ್ಚುವರಿ 5% ಮತ್ತು ವಾರ್ಷಿಕ ಬಡ್ಡಿದರ ಒಳಗೊಂಡಂತೆ (ಕನಿಷ್ಠ ಮೊತ್ತ ರೂ. ಕೋಟಿಗಳಲ್ಲಿ) |
|---|---|---|---|---|
| 1 | **Package-1 (North)** Hebbal near Esteem mall junction to Sheshadri road, Freedom park | 8770.06 | 3508.01 | 5262.05 |
| 2 | **Package-02 (South):** Sheshadri road to Silk board junction. | 8928.42 | 3571.37 | 5357.05 |

ಮೇಲಿನ ಕೋಷ್ಟಕದಲ್ಲಿ ಗಮನಿಸಬಹುದಾದಂತೆ, ಗರಿಷ್ಠ ವಿಜಿಎಫ್ ಮೊತ್ತ ಪ್ಯಾಕೇಜ್-1 (ಉತ್ತರ)ಕ್ಕೆ ರೂ.3508.01 ಕೋಟಿಗಳು ಮತ್ತು ಪ್ಯಾಕೇಜ್-2 (ದಕ್ಷಿಣ)ಕ್ಕೆ ರೂ.3571.37 ಕೋಟಿಗಳಾಗುತ್ತದೆ. ಸದರಿ ಯೋಜನೆಯಲ್ಲಿ ಕಾಮಗಾರಿಯ ನಿರ್ಮಾಣದ ಅವಧಿಯನ್ನು 04 ವರ್ಷಗಳಿಗೆ ಸೀಮಿತಗೊಳಿಸಲಾಗಿದ್ದು, ಗುತ್ತಿಗೆ ಸಂಸ್ಥೆಗಳಿಗೆ ತಮ್ಮ ಬಂಡವಾಳ ಹಿಂಪಡೆಯುವಿಕೆಗಾಗಿ 30 ವರ್ಷಗಳ ಅವಧಿಯನ್ನು ನಿಗದಿಪಡಿಸಲಾಗಿದೆ.

ಸದರಿ ಕಾಮಗಾರಿಯ ಅನುಷ್ಠಾನವನ್ನು ಮಾರುಕಟ್ಟೆ ಕ್ರಿಯಾತ್ಮಕ ಪ್ರತಿಕ್ರಿಯೆಯಂತೆ (Market Dynamic Response) ಯೋಜನೆಯ ನೀತಿಯನ್ನು ರೂಪಿಸಲು, ಮೆ:ಬೋಸ್ಟನ್ ಕನ್ಸಲ್‌ಟಿಂಗ್ ಗ್ರೂಪ್ ಅನ್ನು ನೇಮಿಸಿಕೊಳ್ಳಲಾಗಿದ್ದು, ಸದರಿ ಸಂಸ್ಥೆಯವರು ಯೋಜನೆಯನ್ನು ಸುಧಾರಿತ ಬಿ.ಓ.ಟಿ ಆಧಾರದಲ್ಲಿ (Improvised BOT Model) ಅನುಷ್ಠಾನಗೊಳಿಸಬಹುದೆಂದು ಅಭಿಪ್ರಾಯಿಸಿರುತ್ತಾರೆ. ಸದರಿ ಮಾದರಿಯಂತೆ ಟೆಂಡರ್ ದಸ್ತಾವೇಜು ಅನ್ನು "ಕಾಮಗಾರಿಯ ವಿ.ಜಿ.ಎಫ್ ಮೊತ್ತ" ಮತ್ತು "ಕಾಮಗಾರಿ ಬಂಡವಾಳ ಹಿಂಪಡೆಯುವಿಕೆ ಅವಧಿ"ಯನ್ನು ಮಾರುಕಟ್ಟೆಯ ಕ್ರಿಯಾತ್ಮಕ ಪ್ರತಿಕ್ರಿಯೆ (Market Dynamic Response) ಆಧಾರದಲ್ಲಿ ತಯಾರಿಸಲಾಗಿದೆ. ಈ ಪದ್ಧತಿಯಂತೆ ಬಿ.ಬಿ.ಎಂ.ಪಿ/ ರಾಜ್ಯ ಸರ್ಕಾರಕ್ಕೆ ವಿ.ಜಿ.ಎಫ್‌ನಲ್ಲಿ ಹಾಗೂ ಕಾಮಗಾರಿ ಉಳಿತಾಯ ಬಂಡವಾಳ ಹಿಂಪಡೆಯುವಿಕೆ ಅವಧಿಯು ಕಡಿಮೆಯಾಗುವ ನಿರೀಕ್ಷೆಯನ್ನು ಹೊಂದಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 07-04-2025 ರಲ್ಲಿ ಶ್ರೀಯುತ ಸಿದ್ದನಗೌಡ ಹೆಗ್ಗಾರೆಡ್ಡಿ, ಕಾರ್ಯಕಾರಿ ನಿರ್ದೇಶಕರು, (ಸಿವಿಲ್), BMRCL, ಇವರ ಅಧ್ಯಕ್ಷತೆಯಲ್ಲಿ ಹೆದ್ದಾರಿ ಮತ್ತು ಸುರಂಗ ತಜ್ಞರನ್ನು ಒಳಗೊಂಡಂತೆ ಸಮಿತಿಯನ್ನು ರಚಿಸಿ, ಪಾಲಿಕೆಯು ಸಲ್ಲಿಸಿರುವ ವಿಸ್ತೃತ ಯೋಜನಾ ವರದಿಯನ್ನು ಪರಿಶೀಲಿಸಿ ವರದಿ/ಶಿಫಾರಸ್ಸುಗಳನ್ನು ಸಲ್ಲಿಸುವಂತೆ ಕೋರಲಾಗಿತ್ತು. ಮೇಲೆ ಕ್ರಮ ಸಂಖ್ಯೆ: (3)ರಲ್ಲಿ ಓದಲಾದ ಈ ತಜ್ಞರ ಸಮಿತಿಯು ದಿನಾಂಕ: 05.05.2025ರಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತದೆ. ಈ ತಜ್ಞರ ಸಮಿತಿಯ ವರದಿಯನ್ನು ಪಾಲಿಕೆಯ ಮುಖ್ಯ ಆಯುಕ್ತರಿಗೆ ಮೇಲೆ ಕ್ರಮ ಸಂಖ್ಯೆ: (4)ರಲ್ಲಿ ಓದಲಾದ ದಿನಾಂಕ: 12-05-2025ರಂದು ಕಳುಹಿಸಿ, ತಜ್ಞರ ಸಮಿತಿ ವರದಿಯನುಸಾರ ವಿಸ್ತೃತ ಯೋಜನಾ ವರದಿ ಹಾಗೂ ಅಂದಾಜು ಪಟ್ಟಿಗಳನ್ನು ಪರಿಷ್ಕರಿಸಿ, ಪರಿಷ್ಕೃತ ವಿಸ್ತೃತ ಯೋಜನಾ ವರದಿ ಹಾಗೂ ಅಂದಾಜು ಪಟ್ಟಿಗಳನ್ನೊಳಗೊಂಡ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ನಗರಾಭಿವೃದ್ಧಿ ಇಲಾಖೆಯಿಂದ ಕೋರಲಾಗಿತ್ತು.

ಈ ಸಂಬಂಧ, ಮೇಲೆ ಕ್ರಮ ಸಂಖ್ಯೆ: (5)ರಲ್ಲಿ ಓದಲಾದ ಮುಖ್ಯ ಆಯುಕ್ತರು ದಿನಾಂಕ: 26-05-2025ರ ತಮ್ಮ ಪತ್ರದಲ್ಲಿ, ತಾಂತ್ರಿಕ ತಜ್ಞರ ಸಮಿತಿಯ ವಿಶ್ಲೇಷಣೆ, ಗಮನಿಸಿದ ಅಂಶಗಳು ಹಾಗೂ ಶಿಫಾರಸ್ಸು ಮಾಡಿದ ಅಂಶಗಳನ್ನು, ಮೆ|| ರೋಡಿಕ್ ಕನ್ಸಲ್‌ಟೆಂಟ್ ರವರಿಗೆ ನೀಡಲಾಗಿದ್ದು, ಮೆ|| ರೋಡಿಕ್ ಕನ್ಸಲ್‌ಟೆಂಟ್ ಸಂಸ್ಥೆಯವರು ಸದರಿ ಅಂಶಗಳಿಗೆ ಮೂರು ಭಾಗಗಗಳಲ್ಲಿ ಅನುಪಾಲನಾ ವರದಿಯನ್ನು ಈ ಮುಂದಿನಂತೆ ಸಲ್ಲಿಸಿದ್ದು, 1. Compliance to the observation made by the Expert Review Committee 2. Detailed Geo Technical Interpretative report 3. Ventilation design report ಸದರಿ ಅನುಪಾಲನಾ ವರದಿಯನ್ನು ಪರಿಶೀಲಿಸಲಾಗಿದ್ದು, ತಾಂತ್ರಿಕ ತಜ್ಞರ ಸಮಿತಿಯ ವಿಶ್ಲೇಷಣೆ, ಗಮನಿಸಿದ ಅಂಶಗಳು ಮತ್ತು ಶಿಫಾರಸ್ಸುಗಳಿಗೆ ಅನುಪಾಲನಾ ವರದಿಯನ್ನು ನೀಡಿರುವುದು ಸಮಂಜಸವಾಗಿದೆಯೆಂದು ಅಭಿಪ್ರಾಯಿಸಿ ಸದರಿ ಅನುಪಾಲನಾ ವರದಿಯನ್ನು ಸರ್ಕಾರದ ಮುಂದಿನ ಕ್ರಮಕ್ಕೆ ಸಲ್ಲಿಸಿರುವುದಾಗಿ ತಿಳಿಸುತ್ತಾ, ಹೆಬ್ಬಾಳ ಮೇಲ್ಸೇತುವೆ (ಎಸ್ಟೀಮ್‌ಮಾಲ್)ಪ್ರದೇಶದಿಂದ ಹೊಸೂರು ರಸ್ತೆಯ ಸಿಲ್ಕ್‌ಬೋರ್ಡ್‌ಜಂಕ್ಷನ್‌ನ ಮೇಲ್ಸೇತುವೆವರೆವಿಗೂ ಭೂಗತ ಸುರಂಗ (Urban Tunnel) ಪ್ರಸ್ತಾವನೆಗೆ ಅನುಮೋದನೆ ಕೋರಿರುತ್ತಾರೆ.

ತಾಂತ್ರಿಕ ತಜ್ಞರ ಸಮಿತಿಯ ವರದಿಯ ಮೇಲೆ, ವಿಸ್ತೃತ ಯೋಜನಾ ವರದಿ ಹಾಗೂ ಅಂದಾಜುಪಟ್ಟಿಗಳನ್ನು ತಯಾರಿಸಿದ ಮೆ|| ರೋಡಿಕ್‌ಕನ್ಸಲ್‌ಟೆಂಟ್‌ಸಂಸ್ಥೆಯವರು, ಮೂರು ಭಾಗಗಗಳಲ್ಲಿ ಸಲ್ಲಿಸಿದ್ದ ಅನುಪಾಲನಾ ವರದಿಯನ್ನು ಮತ್ತೊಮ್ಮೆ ಶ್ರೀ ಸಿದ್ದನಗೌಡ ಹೆಗ್ಗಾರೆಡ್ಡಿ, ರವರ ಅಧ್ಯಕ್ಷತೆಯ ತಾಂತ್ರಿಕ ತಜ್ಞರ ಸಮಿತಿಗೆ ನಗರಾಭಿವೃದ್ಧಿ ಇಲಾಖೆಯಿಂದ ಮೇಲೆ ಕ್ರಮ ಸಂಖ್ಯೆ: (6)ರಲ್ಲಿ ಓದಲಾದ ದಿನಾಂಕ: 27.05.2025ರಂದು ಕಳುಹಿಸಿ ಸಮಗ್ರವಾಗಿ ಪರಿಶೀಲಿಸಿ ಅಭಿಪ್ರಾಯ/ಶಿಫಾರಸ್ಸುಗಳನ್ನು ನೀಡುವಂತೆ ಕೋರಲಾಗಿತ್ತು.

ಪ್ರಸ್ತುತ ಶ್ರೀ ಸಿದ್ದನಗೌಡ ಹೆಗ್ಗಾರೆಡ್ಡಿ, ರವರ ನೇತೃತ್ವದ ತಾಂತ್ರಿಕ ತಜ್ಞರ ಸಮಿತಿಯು ಮೇಲೆ ಕ್ರಮ ಸಂಖ್ಯೆ: (7) ರಲ್ಲಿ ಓದಲಾದ ದಿನಾಂಕ: 29.05.2025ರಂದು ಸರ್ಕಾರಕ್ಕೆ ವರದಿಯನ್ನು ಈ ಕೆಳಕಂಡಂತೆ ಸಲ್ಲಿಸಿರುತ್ತದೆ:

On examination of the Reply/Compliance provided by DPR Consultants M/s. Rodic Consultants Pvt Ltd., Committee is of the opinion that,

1. The explanation / additional information provided for the observations made in the Review Report of the Committee are generally in order and same has already been accepted by BBMP.

2. The cost estimate in the DPR seems to be on lower side when compared with the other ongoing Road Tunnel Projects in Mumbai. On the other hand the tunnelling in Bangalore is more difficult due to complex geological conditions and will involve additional costs.

3. It is seen that the bare minimum Geological / Geotechnical Investigation have been carried out for preparation of DPR as per IS Code. However, based on the Metro Tunnelling experience in Bengaluru, the extensive Geological / Geotechnical Investigations are necessary to minimise geological surprises during execution. In the absence of such extensive Investigation the cost of tunnelling in the estimate needs to be enhanced by about 10% to 15% to take care of risks involved in handling unforeseen conditions likely to be met during execution.

DPR & Estimate ಗಳ ಅಂದಾಜು ಮೊತ್ತವನ್ನು ಶೇ.10 ರಿಂದ ಶೇ.15 ರಷ್ಟು ಪ್ರಮಾಣದಲ್ಲಿ ಹೆಚ್ಚಿಸಿಕೊಳ್ಳುವುದು ಸೂಕ್ತವೆಂದು ತಜ್ಞರ ವರದಿಯಲ್ಲಿ ಅಭಿಪ್ರಾಯಿಸಲಾಗಿದೆ. ಪ್ರಸ್ತುತ ಹಂತದಲ್ಲಿ ವಿಸ್ತೃತ ಯೋಜನಾ ವರದಿ ಹಾಗೂ ಅಂದಾಜು ಪಟ್ಟಿಗಳನ್ನು ಪರಿಷ್ಕರಿಸಲು ಸಾಧ್ಯವಾಗದಿರುವುದರಿಂದ, ಬಿಡ್‌ಸಲ್ಲಿಕೆಯಾದ ನಂತರ ಬಿಡ್‌ಮೌಲ್ಯ ಮಾಪನ ಮತ್ತು ಬಿಡ್ ಪರಿಶೀಲನೆ ಸಂದರ್ಭದಲ್ಲಿ ತಜ್ಞರ ಸಮಿತಿಯ ವರದಿಯಲ್ಲಿನ ಎಲ್ಲ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

ಮೇಲೆ ವಿವರಿಸಿರುವ ಪ್ರಸ್ತಾವನೆಯ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 82 ಎಂಎನ್‌ವೈ 2025 (ಇ)**
**ಬೆಂಗಳೂರು, ದಿನಾಂಕ: 09-06-2025.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಈ ಕೆಳಕಂಡ ಅಂಶಗಳಿಗೆ ಸರ್ಕಾರದ ಅನುಮೋದನೆ ನೀಡಿ ಆದೇಶಿಸಿದೆ.

1. "Design and Construction of 3-Lane Underground Twin Tunnel Road from Hebbal Esteem Mall junction (Km. 0+000) and Silk Board KSRP Junction (Km.16+745) along with 3-lane/2-lane entry & exit ramps, including operation and maintenance in Bengaluru City (North – South Corridor)" ರ ಅನುಮೋದನೆಗಾಗಿ ಪ್ರಸ್ತುತ, ಬಿ.ಎಂ.ಎಲ್.ಟಿ ಕಾಯ್ದೆಗೆ ನಿಯಮಗಳನ್ನು

ಸೃಜಿಸಿಲ್ಲದ ಹಿನ್ನಲೆಯಲ್ಲಿ, ಹಾಗೂ ಆಯುಕ್ತರು, DULT ರವರ ಹಿಂಬರಹದನ್ವಯ ಸರ್ಕಾರದ ಅನುಮೋದನೆಯೊಂದಿಗೆ ಅನುಷ್ಠಾನಗೊಳಿಸುವುದು.

2. "Design and Construction of 3-Lane Underground Twin Tunnel Road from Hebbal Esteem Mall junction (Km. 0+000) and Silk Board KSRP Junction (Km.16+745) along with 3-lane/2-lane entry & exit ramps, including operation and maintenance in Bengaluru City (North – South Corridor)" ಯೋಜನೆಯ ಅಂದಾಜು ಮೊತ್ತ ರೂ.17,780.13 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

3. ಸದರಿ ಯೋಜನೆಯನ್ನು ಪ್ಯಾಕೇಜ್-1 (ಉತ್ತರ) ಮತ್ತು ಪ್ಯಾಕೇಜ್-2 (ದಕ್ಷಿಣ) ಎಂದು ಎರಡು ಪ್ಯಾಕೇಜ್‌ಗಳ ಅಡಿಯಲ್ಲಿ ಪ್ರತ್ಯೇಕವಾಗಿ, ಸುಧಾರಿತ ಬಿ.ಓ.ಓ.ಟಿ (BOOT) ಮಾದರಿಯಲ್ಲಿ Global Tender ಆಹ್ವಾನಿಸಿ ಅನುಷ್ಠಾನಗೊಳಿಸಲು ಅನುಮೋದಿಸಿದೆ.

4. "Design and Construction of 3-Lane Underground Twin Tunnel Road from Hebbal Esteem Mall junction (Km. 0+000) and Silk Board KSRP Junction (Km.16+745) along with 3-lane/2-lane entry & exit ramps, including operation and maintenance in Bengaluru City (North – South Corridor)" ಯೋಜನೆಯ ಪ್ಯಾಕೇಜ್-1 (ಉತ್ತರ) Hebbal near Esteem Mall Junction to Sheshadri Road Freedom Park (KM8 +748)ರ ಅಂದಾಜು ಪಟ್ಟಿಯ ಮೊತ್ತ ರೂ.8814.78 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಒಟ್ಟು ಯೋಜನಾ ಮೊತ್ತದ ಶೇ.40ರಷ್ಟನ್ನು ವಿ.ಜಿ.ಎಫ್ ಆಧಾರದಲ್ಲಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಬಿಬಿಎಂಪಿ ಸಂಸ್ಥೆಯು ವಿ.ಜಿ.ಎಫ್ ಪಾಲುದಾರಿಕೆ ಮೊತ್ತ ಶೇ.40ರಷ್ಟನ್ನು (ಜಿ.ಎಸ್.ಟಿ ಹೊರತುಪಡಿಸಿ) ಸುಧಾರಿತ BOOT ಮಾದರಿಯಲ್ಲಿ ಆಯ್ಕೆಯಾಗುವ ಯಶಸ್ವಿ ಬಿಡ್ಡುದಾರ ಸಂಸ್ಥೆಗೆ ಪಾವತಿಸಲು ಅನುಮೋದನೆ ನೀಡಿದೆ.

5. "Design and Construction of 3-Lane Underground Twin Tunnel Road from Hebbal Esteem Mall junction (Km. 0+000) and Silk Board KSRP Junction (Km.16+745) along with 3-lane/2-lane entry & exit ramps, including operation and maintenance in Bengaluru City (North – South Corridor)" ಯೋಜನೆಯ ಪ್ಯಾಕೇಜ್-2 (ದಕ್ಷಿಣ) Sheshadri Road to Silk Board Junction Chainage 8.748 Kms to 16.74 Kms ರ ಅಂದಾಜು ಪಟ್ಟಿಯ ಮೊತ್ತ ರೂ.8965.35 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಒಟ್ಟು ಯೋಜನಾ ಮೊತ್ತದ ಶೇ.40ರಷ್ಟನ್ನು ವಿ.ಜಿ.ಎಫ್ ಆಧಾರದಲ್ಲಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಬಿಬಿಎಂಪಿ ಸಂಸ್ಥೆಯು ವಿ.ಜಿ.ಎಫ್ ಪಾಲುದಾರಿಕೆ ಮೊತ್ತ ಶೇ.40ರಷ್ಟನ್ನು (ಜಿ.ಎಸ್.ಟಿ ಹೊರತುಪಡಿಸಿ) ಸುಧಾರಿತ BOOT ಮಾದರಿಯಲ್ಲಿ ಆಯ್ಕೆಯಾಗುವ ಯಶಸ್ವಿ ಬಿಡ್ಡುದಾರ ಸಂಸ್ಥೆಗೆ ಪಾವತಿಸಲು ಅನುಮೋದನೆ ನೀಡಿದೆ.

6. "Design and Construction of 3-Lane Underground Twin Tunnel Road from Hebbal Esteem Mall junction (Km. 0+000) and Silk Board KSRP Junction (Km.16+745) along with 3-lane/2-lane entry & exit ramps, including operation and maintenance in Bengaluru City (North – South Corridor)" ವಿಸ್ತೃತ ಯೋಜನಾ ವರದಿ ಅಂದಾಜು ಮೊತ್ತವು, ಪ್ರಾರಂಭಿಕ ಭೂ-ಸ್ವಾಧೀನ ವೆಚ್ಚ ಅಂದಾಜು ರೂ.800.00 ಕೋಟಿಗಳನ್ನು ಒಳಗೊಳ್ಳಲಿದ್ದು, ಭೂ-ಸ್ವಾಧೀನ ವೆಚ್ಚ ರೂ.800.00 ಕೋಟಿಗಳಿಗೆ ಪ್ರತ್ಯೇಕವಾಗಿ ಆಡಳಿತಾತ್ಮಕ ಅನುಮೋದನೆ ನೀಡಿದೆ.

7. "Design and Construction of 3-Lane Underground Twin Tunnel Road from Hebbal Esteem Mall junction (Km. 0+000) and Silk Board KSRP Junction (Km.16+745) along with 3-lane/2-lane entry & exit ramps, including operation and maintenance in Bengaluru City (North – South Corridor)" ಎಂಬ ಯೋಜನೆಯನ್ನು ಅನುಷ್ಠಾನಗೊಳಿಸಲು, ಪ್ರಾರಂಭಿಕವಾಗಿ ಉಪಲಬ್ಧಗಳನ್ನು ಸ್ಥಳಾಂತರ ಕಾಮಗಾರಿಗೆ ರೂ.150.00 ಕೋಟಿಗಳು ಬೇಕಾಗಿದ್ದು, ಈ ಮೊತ್ತವನ್ನು, ವಿಸ್ತೃತ ಯೋಜನಾ ವರದಿ ಅಂದಾಜು ಮೊತ್ತವು ಒಳಗೊಳ್ಳಲಿದ್ದು, ಉಪಲಬ್ಧಗಳ ಸ್ಥಳಾಂತರ ವೆಚ್ಚ ರೂ.150.00 ಕೋಟಿಗಳಿಗೆ ಪ್ರತ್ಯೇಕವಾಗಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಹಾಗೂ ಸದರಿ ಕಾಮಗಾರಿಯನ್ನು ರಿಯಾಯಿತಿ ಪಡೆದ ಸಂಸ್ಥೆಯ ವತಿಯಿಂದ ಆಯಾ ಉಪಲಬ್ಧ ಮಾಲೀಕತ್ವ ಸಂಸ್ಥೆಗಳು ತಯಾರಿಸುವ ಅಂದಾಜು ಪಟ್ಟಿಯ ಎಸ್.ಆರ್.ದರಗಳಂತೆ ಕಾಮಗಾರಿಯನ್ನು ನಿರ್ವಹಿಸಲು ವಹಿಸಲಾಗುವ ಕ್ರಮಕ್ಕೆ ಅನುಮೋದನೆ ಹಾಗೂ ಸದರಿ ಉಪಲಬ್ಧಗಳ ಕಾಮಗಾರಿಗಳನ್ನು ಎಸ್.ಆರ್.ದರದಲ್ಲಿ ನಿರ್ವಹಿಸುವ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡುವ ಅಧಿಕಾರವನ್ನು Bengaluru Smart Infrastructure Limited ಕಂಪನಿಗೆ ನೀಡಲು ಅನುಮೋದನೆ ನೀಡಿದೆ.

8. ಯೋಜನೆಗೆ ಈಗಾಗಲೇ ಸರ್ಕಾರದಿಂದ ರೂ.19000.00 ಕೋಟಿಗಳ ಸಾಲವನ್ನು ಪಡೆಯಲು ಸರ್ಕಾರದ ಗ್ಯಾರಂಟಿಯನ್ನು ನೀಡಲಾಗಿದ್ದು, ಪ್ರಸ್ತುತ ಮೆ||ಹುಡ್ಕೋ ಸಂಸ್ಥೆಯವರು ಸಂಧಾನದ ನಂತರ ನೀಡಿರುವ ಸಿ.ಓ.ಡಿ ಮುಂಚಿತ ಬಡ್ಡಿ ದರ ಶೇ.8.95% ಮತ್ತು ಸಿ.ಓ.ಡಿ ನಂತರದ ಬಡ್ಡಿ ದರ ಶೇ.8.95%ರಷ್ಟು ರಂತೆ ಪ್ಯಾಕೇಜ್-1ಕ್ಕೆ ರೂ.4614.45 ಕೋಟಿಗಳನ್ನು (ಜಿ.ಎಸ್.ಟಿ, ಭೂ-ಸ್ವಾಧೀನ ಮತ್ತು ಉಪಲಬ್ಧ ಸ್ಥಳಾಂತರ ಅಂಶಗಳು ಒಳಗೊಂಡಂತೆ) ಮತ್ತು ಪ್ಯಾಕೇಜ್-2ಕ್ಕೆ ರೂ.4,689.21 ಕೋಟಿಗಳನ್ನು (ಜಿ.ಎಸ್.ಟಿ, ಭೂ-ಸ್ವಾಧೀನ ಮತ್ತು ಉಪಲಬ್ಧ ಸ್ಥಳಾಂತರ ಅಂಶಗಳು ಒಳಗೊಂಡಂತೆ) ಒಟ್ಟು ರೂ.9303.66 ಕೋಟಿಗಳ ಆರ್ಥಿಕ ಸಾಲವನ್ನು ಪಡೆಯಲು ಅನುಮೋದನೆ ನೀಡಿದೆ.

9. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ರೂ.17,780.13ಕೋಟಿಗಳಿಗೆ ಸಲ್ಲಿಸಿರುವ ಅಂದಾಜುಗಳನ್ನು, ತಾಂತ್ರಿಕ ತಜ್ಞರ ಸಮಿತಿಗೆ ಒದಗಿಸಿ ಅಭಿಪ್ರಾಯ

ಕೋರಲಾಗಿ, ತಜ್ಞರ ಸಮಿತಿಯು ದಿನಾಂಕ: 05-05-2025 ಮತ್ತು ದಿನಾಂಕ: 29-05-2025ರ ತನ್ನ ವರದಿಯ ಅವಲೋಕನದಲ್ಲಿ, ತಯಾರಿಸಲಾಗಿರುವ ಅಂದಾಜುಗಳು ಅತ್ಯಂತ ಮಿತವ್ಯಯಕಾರಿಯಾಗಿವೆ ಎಂದು ಅಭಿಪ್ರಾಯಪಟ್ಟಿರುವುದರಿಂದ, ಅಂದಾಜು ಪಟ್ಟಿಗಳನ್ನು ಆಡಳಿತಾತ್ಮಕ ಅನುಮೋದನೆಗೆ ಪರಿಗಣಿಸಲಾಗಿದೆ. ಟೆಂಡರ್‌ನಲ್ಲಿ ಸಲ್ಲಿಕೆಯಾದ ಬಿಡ್‌ಗಳ ಮೌಲ್ಯ ಮಾಪನ ಸಂದರ್ಭದಲ್ಲಿ, ಅಂದಾಜು ಮೊತ್ತದಲ್ಲಿ ಏರಿಕೆ ಉಂಟಾದಲ್ಲಿ, ತಜ್ಞರ ಅಭಿಪ್ರಾಯವನ್ನು ಪರಿಗಣಿಸಿ ಮತ್ತೊಮ್ಮೆ ಸಚಿವ ಸಂಪುಟದ ಮುಂದೆ ಮಂಡಿಸಲು ಪ್ರಸ್ತಾವನೆ ಸಲ್ಲಿಸುವುದು.

**<u>ಷರತ್ತುಗಳು:</u>**

1) ಈ ಕಾಮಗಾರಿಗಳನ್ನು ಆಯವ್ಯಯದ ಘೋಷಣೆಯಂತೆ ಸಕ್ಷಮ ಪ್ರಾಧಿಕಾರಗಳಿಂದ ತಾಂತ್ರಿಕ ಅನುಮೋದನೆ ಪಡೆದು, ಟೆಂಡರ್ ಪ್ರಕ್ರಿಯೆಗಳನ್ನು ಕೆ.ಟಿ.ಪಿ.ಪಿ. ಕಾಯ್ದೆ 1999 ಮತ್ತು ಕೆ.ಟಿ.ಪಿ.ಪಿ ನಿಯಮಗಳು 2000 ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಕೈಗೊಂಡು, ಟೆಂಡರ್‌ಗಳಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 47 ಎಸ್‌ಎಫ್‌ಸಿ 2016, ಬೆಂಗಳೂರು ದಿನಾಂಕ 14-06-2016 ಹಾಗೂ ದಿನಾಂಕ: 03-11-2016 ರಂತೆ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆದು ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು.

2) ಕರ್ನಾಟಕ ಆರ್ಥಿಕ ಸಂಹಿತೆ ಮತ್ತು ಸಾದಿಲ್ವಾರು ವೆಚ್ಚ ಕೈಪಿಡಿ- ಅಧಿನಿಯಮಗಳನ್ನು ಪಾಲಿಸುವುದು.

ಈ ಆದೇಶವನ್ನು ದಿನಾಂಕ: 05-06-2025 ರಂದು ನಡೆದ ಸಚಿವ ಸಂಪುಟ ಸಭೆಯ ವಿಷಯ ಸಂಖ್ಯೆ: ಸಿ: 357/2025ರ ನಿರ್ಣಯದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

**(ಲಕ್ಷ್ಮೀಸಾಗರ್ ಎನ್.ಕೆ.)**
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ (ಬಿಬಿಎಂಪಿ-1)

**<u>ಇವರಿಗೆ:</u>**

1) ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು.

4) ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು.
5) ಆಡಳಿತಗಾರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
6) ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7) ವ್ಯವಸ್ಥಾಪಕ ನಿರ್ದೇಶಕರು, B-SMILE, ಬೆಂಗಳೂರು.
8) ವಿಶೇಷ ಆಯುಕ್ತರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
9) ಮಾನ್ಯ ಉಪ ಮುಖ್ಯಮಂತ್ರಿಯವರ ಕಾರ್ಯದರ್ಶಿ, ವಿಧಾನಸೌಧ, ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು.
10) ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ, B-SMILE, ಬೆಂಗಳೂರು.
11) ನಿರ್ದೇಶಕರು (ತಾಂತ್ರಿಕ), B-SMILE, ಬೆಂಗಳೂರು.
12) ಸರ್ಕಾರದ ಅಪರ ಕಾರ್ಯದರ್ಶಿಗಳು, ಸಚಿವ ಸಂಪುಟ, ವಿಧಾನಸೌಧ, ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು. (ಪ್ರಕರಣ ಸಂಖ್ಯೆ: ಸಿ: 357/2025, ದಿನಾಂಕ: 05-06-2025).
13) ಮಾನ್ಯ ಉಪ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು.
14) ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
15) ಮುಖ್ಯ ಅಭಿಯಂತರರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
16) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು.
17) ಸರ್ಕಾರದ ವಿಶೇಷ ಕಾರ್ಯದರ್ಶಿಯವರ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ (ಬಿಬಿಎಂಪಿ & ಸಮನ್ವಯ), ವಿಕಾಸಸೌಧ, ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು.
18) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.